# MYSORE LEGISLATIVE ASSEMBLY.

## SIXTY-SIXTH DAY.

*Friday, 4th October 1963.*

The House met in the Assembly Hall, Vidhana Soudha, Bangalore, at Thirty Minutes past Twelve of the Clock.

[MR. SPEAKER (SRI B. VAIKUNTA BALIGA, B. A., B. L.) in the Chair.]

### Members' Representations.

† ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಈ ದಿವಸ ನಥಿ ಪ್ರಾರಂಭವಾದ ಕೂಡಲೆ ಇಲ್ಲ ಪ್ರಶ್ನೋತ್ತರಗಳು ನಡೆಯಬೇಕಾದ್ದು ಒಂದು ಸಂಪ್ರದಾಯ. ಹೀಗೆ ಹಿಂದಿನಿಂದಲೂ ನಡೆದು ಕೊಂಡು ಬಂದಿದೆ. ಆದರೆ ಈ ದಿವಸ ಪ್ರಶ್ನೋತ್ತರಗಳ ಚರ್ಚೆಯೇ ಇರುವುದಿಲ್ಲ. ಈ ಅಧಿವೇಶನದ ಬಗ್ಗೆ ನಾವು ವಿಧಾನ ಮಂಡಲದ ಕಛೇರಿಗೆ ಸುಮಾರು 300-400 ಪ್ರಶ್ನೆಗಳನ್ನು ಕಳುಹಿಸಿದ್ದೇವೆ. ಸದಸ್ಯರು ಕಳುಹಿಸಿರತಕ್ಕಂಥ ಪ್ರಶ್ನೆಗಳಿಗೆ ಸರ್ಕಾರ ಉತ್ತರವನ್ನು ಒದಗಿಸತಕ್ಕ ವಿಚಾರದಲ್ಲಿ ಇಷ್ಟೊಂದು ತಾತ್ಸಾರಭಾವನೆ ತಾಳಿರುವುದನ್ನು ನೋಡಿದರೆ ಸರ್ಕಾರ ಹೀಗೇ ಇನ್ನೂ ಎಷ್ಟೆಷ್ಟು ವಿಚಾರಗಳಲ್ಲಿ ಎಚ್ಚರದಪ್ಪಿದೆ ಎಂಬುದು ಇದರಿಂದಲೇ ಸರ್ವರಿಗೂ ವೇದ್ಯವಾಗುತ್ತದೆ. ಪ್ರಶ್ನೆಗಳನ್ನು ಕೇಳತಕ್ಕದ್ದು ಶಾಸನ ಸಭಾ ಸದಸ್ಯರ ಹಕ್ಕು. ಆ ಪ್ರಶ್ನೆಗಳಿಗೆ ಉತ್ತರಗಳನ್ನೊದಗಿಸುವುದು ಸರ್ಕಾರದವರ ಆದ್ಯಕರ್ತವ್ಯ. ಹೀಗಿರುವಾಗ ಸರ್ಕಾರದವರ ಈ ಒಂದು ತಾತ್ಸಾರ ಭಾವನೆಯಿಂದ ಸದಸ್ಯರ ಹಕ್ಕು ದಿನೇ ದಿನೇ ಕ್ಷೀಣಗತಿಗೆ ಬರುತ್ತಿದೆ. ಆದುದರಿಂದ ಅಧ್ಯಕ್ಷರು ಇದರ ಬಗ್ಗೆ ತೀವ್ರ ಗಮನ ಕೊಟ್ಟು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† Sri K. LAKKAPPA (Hebbur).—I invite attention to rule 32 of the Rules of Procedure.

> "Unless the Speaker otherwise directs, the first hour of every day of meeting shall be available for the asking and answering of questions."

Now there is a question hour but no questions and answers are forthcoming.

Mr. SPEAKER.—If it is a question of satisfying the Hon'ble member himself by repeating, I am not gonig to allow it.

Sri K. LAKKAPPA.—I want a clarification on this point by the Speaker, because no questions and answers are forthcoming. What is the alternative procedure the Speaker has to observe? I think the Speaker has to adjourn the House.....

†Indicates that the remarks or speeches have not been revised by the member concerned.

**Mr. SPEAKER.**—Has the Hon'ble Member read all the rules? Which is the rule he has in his mind regarding the adjournment of the House?

**Sri K. LAKKAPPA.**—Rule 32.

**Mr. SPEAKER.**—Let him kindly give the gist of it.

**Sri K. LAKKAPAA.**—Unless the Speaker otherwise directs, the first hour of every day of the meeting shall be available for the answering of questions Government has not sent replies to the questions sent by members. The Speaker has warned the Government repeatedly and still the Government is showing audacity to this House. They are not sending replies. The first hour of every day of meeting shall be available for answering questions, unless the Speaker has got special reason to postpone or adjourn the question hour. The Speaker may kindly direct the Government to send answers for the questions already sent by the member. It is seen that in spite of repeated requests by the Chair, they have not sent replies to certain questions.

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಈ ಸಭೆಯ ಮೊದಲನೆಯ ಒಂದು ಗಂಟೆ ಕಾಲವನ್ನು ಪ್ರಶ್ನೋತ್ತರಗಳಿಗಾಗಿ ಉಪಯೋಗಿಸಬೇಕೆಂದು ರೂಲ್ಸಿನಲ್ಲಿಯೂ ಇದೆ ಹಾಗೂ ಇದನ್ನು ಒಂದು ಕನ್‌ವೆನ್‌ಷನ್ನಾಗಿ ಹಿಂದಿನಿಂದಲೂ ನಾವು ಅನುಸರಿಸಿಕೊಂಡು ಬಂದಿದ್ದೇವೆ. ಇಲ್ಲಿಗೆ ಕೆಲವು ದಿನಗಳಿಂದ ಸರ್ಕಾರದವರು ತೀರಾ ಕಡಮೆ ಪ್ರಶ್ನೆಗಳಿಗೆ ಉತ್ತರಗಳನ್ನೊದಗಿಸುತ್ತಿದ್ದು ಈ ದಿವಸ ಸಂಪೂರ್ಣವಾಗಿ ಅದನ್ನು ಕೈಬಿಟ್ಟಿದ್ದಾರೆ.

**Mr. SPEAKER.**—I hope the Hon'ble member remembers what I said. If it is repeating what others said, there is no point.

ಶ್ರೀ ಎಸ್. ಗೋಪಾಲ ಗೌಡ.—ನಾವು ಮೊನ್ನೆತಾನೆ ಈ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೆವು. ಆಗ ತಾವು ಈ ವಿಚಾರವನ್ನು ಪರಿಶೀಲಿಸುವುದಾಗಿ ಸಭೆಗೆ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಿರಿ. ಅದರಂತೆ ತಾವು ಸರ್ಕಾರಕ್ಕೆ ತಿಳಿವಳಿಕೆ ಕೊಟ್ಟಿದ್ದಾಯಿತು. ಆದಾಗ್ಯೂ ಸರ್ಕಾರದವರು ಈ ವಿಚಾರಕ್ಕೆ ಅಷ್ಟಾಗಿ ಗಮನ ಕೊಟ್ಟ ಹಾಗೆ ಕಾಣುತ್ತಿಲ್ಲ. ಸರ್ಕಾರದವರು ಈ ಮಾನ್ಯ ಸಭೆಯ ಹಕ್ಕುಬಾಧ್ಯತೆಗಳಿಗೆ ಧಕ್ಕೆಬರುವ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಇದೇ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರಬೇಕೆಂದಿರುವ ಮತ್ತೊಂದು ವಿಚಾರವೇನೆಂದರೆ ಈ ಸಭೆ ಇಲ್ಲಿ ನಡೆಯುತ್ತಿರುವ ಕಾಲದಲ್ಲಿ ಸಾಮಾನ್ಯವಾಗಿ ಎಲ್ಲ ಮಂತ್ರಿಗಳೂ ಇಲ್ಲಿ ಹಾಜರಿರಬೇಕಾದ್ದು ಅವಶ್ಯಕ. ಹಾಗಿರುವಾಗ ಕೆಲವು ಮಂತ್ರಿಗಳು ಊರಲ್ಲಿದ್ದರೂ ಕೆಲವು ನೆಪಗಳನ್ನು ಹೇಳಿಕೊಂಡು ಅವರು ಈ ಸಭೆಗೇ ಬರುತ್ತಿಲ್ಲ. ಇದನ್ನು ನೋಡಿದರೆ ಈ ಶಾಸನ ಸಭೆಯು ಸರ್ಕಾರದ ಒಂದು ಕೈಗೂಸಿದ್ದ ಹಾಗಾಗಿದೆ. ಆದುದರಿಂದ ಅಧ್ಯಕ್ಷರು ಸರ್ಕಾರದವರಿಗೆ ಸೂಕ್ತ ತಿಳಿವಳಿಕೆಯನ್ನು ಕೊಟ್ಟು ಅವರು ಈ ಸಭೆಗೆ ಎಲ್ಲ ಗೌರವ ಹಾಗೂ ಅಧ್ಯತೆಯನ್ನು ತೋರಿಸುವಂತೆ ಎಚ್ಚರಿಸಬೇಕಾಗಿದೆ ಮತ್ತು ಯಾವಾದರೂ ಮಂತ್ರಿಗಳು ಗೈರಾಜರಾಗುವುದಿದ್ದರೆ ಅವರು ಅಧ್ಯಕ್ಷರಿಂದ ಅನುಮತಿ ಪಡೆಯಬೇಕು. ತಾವು ಇಷ್ಟು ವಿಚಾರವನ್ನು ಸರ್ಕಾರದವರಿಗೆ ತಿಳಿಸಬೇಕು. ಇನ್ನು ನಾನು 1962 ರಲ್ಲಿ ಕಳುಹಿಸಿದ ಒಂದು ಪ್ರಶ್ನೆಗೂ ಸರ್ಕಾರದಿಂದ ಉತ್ತರವೇ ದೊರೆಯಲಿಲ್ಲ. ಅನನ್ನ ಪ್ರಶ್ನೆಗಳೊಂದೂ ಈ ಸಭೆಯಲ್ಲಿ ಚರ್ಚೆಗೇ ಬರಲಿಲ್ಲ. ಮೊನ್ನೆಕಳುಹಿಸಿದ ಪ್ರಶ್ನೆಗಳಿಗೂ ಸಹಾ ಉತ್ತರಗಳನ್ನು ಸರ್ಕಾರದವರು ಒದಗಿಸಿಲ್ಲ. ಇದನ್ನು ನೋಡಿದರೆ ಸರ್ಕಾರಕ್ಕೆ ಉದ್ದೇಶಪೂರ್ವಕವಾಗಿ ನನ್ನ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಬಾರದೆಂಬ ಅಭಿಪ್ರಾಯವಿದ್ದಂತೆ ಕಾಣುತ್ತಿದೆ. ಅದೇನು ನನ್ನ ಪ್ರಶ್ನೆಗೆ ಉತ್ತರ ಒದಗಿಸಲು ಅಷ್ಟು ವಿಳಂಬವಾಗುತ್ತಿದೆಯೋ ನನಗೆ ಅದರ ಮರ್ಮವೇ ಗೊತ್ತಾಗುತ್ತಿಲ್ಲ. ಬಹುಶಃ ಸರ್ಕಾರದವರಿಗೆ ನನ್ನ ಪ್ರಶ್ನೆಗಳಿಗೆ ಉತ್ತರ ಒದಗಿಸಲು ಮನಸ್ಸಿಲ್ಲವೆಂದು ಕಾಣುತ್ತದೆ. ಹೀಗಾದರೆ ಈ ಪ್ರಶ್ನೆ ಕೇಳತಕ್ಕ ಸಂದರ್ಭವೇಸಿದೆ ಇದು ಅರ್ಥಹೀನವಾಗುತ್ತದೆ. ಆದುದರಿಂದ ಅಧ್ಯಕ್ಷರು ಸರ್ಕಾರಕ್ಕೆ ಪಾರ್ಲಿಯಮೆಂಟರಿ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಸಾಕಷ್ಟು ತೀವ್ರಾಸಕ್ತಿ ವಹಿಸುವಂತೆ ಒಂದು ನಿರ್ದೇಶವನ್ನು ಕೊಡಬೇಕೆಂಬುದಾಗಿ ನಾನೀಗ ಈ ಸಭೆಯ ಪರವಾಗಿ ತಮ್ಮನ್ನು ಕೇಳಿಕೊಳ್ಳುತ್ತೇನೆ.

†ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು-2).—ಸ್ವಾಮಿ, ನಮಗೆ ಈ ಹಿಂದೆ ಹತ್ತು ಪ್ರಶ್ನೆಗಳನ್ನು ಕಳುಹಿಸುವುದಕ್ಕೆ ಅವಕಾಶವಿತ್ತು. ಅದು ಈಗ ಹೋಗಿ 4-5 ಪ್ರಶ್ನೆಗಳಿಗೆ ಬಂದು ಇಳಿದಿದೆ. ಇಷ್ಟಾದರೂ ಈ ಪ್ರಶ್ನೆಗಳಿಗೆ ಸರ್ಕಾರದವರು 15 ದಿವಸಗಳಲ್ಲಿ ಉತ್ತರಗಳನ್ನು ಓದಗಿಸಬೇಕೆಂದು ರೂಲ್ಸಿನಲ್ಲಿ ತಿಳಿಸಿದೆ. ಆ ನಮ್ಮ ಪಾರ್ಲಮೆಂಟಿನವರಾದರೋ ಒಂದೇವಾರದಲ್ಲಿ ಉತ್ತರಗಳನ್ನೊದಗಿಸಲಾಗುತ್ತಿದೆ. ನಮ್ಮ ಕೆಲವು ಪ್ರಶ್ನೆಗಳಿಗೆ ಸೆಕ್ರೆಟೇರಿಯಟ್ಟಿನಿಂದಲೇ ಉತ್ತರ ದೊರೆಯುವಂತಿದ್ದರೂ ಕಾಲಕ್ಕೆ ಸರಿಯಾಗಿ ಉತ್ತರಗಳು ಬರುತ್ತಿಲ್ಲ. ಪ್ರಶ್ನೋತ್ತರದ ಕಾಲವೆಂದರೆ ನಿಜವಾಗಿಯೂ ಜನರ ಒಂದು ಕುತೂಹಲವನ್ನು ಕೆರಳಿಸುವಂಥ ಸಂದರ್ಭ. ಇದನ್ನು ಕೂಡ ಸರಿಯಾಗಿ ನಡುಪಯೋಗ ಮಾಡಲು ಸಾಧ್ಯವಿಲ್ಲದಿದ್ದರೆ ಇದರ ಬಗ್ಗೆ ಅಧ್ಯಕ್ಷರು ಮುಖ್ಯವಾದ ಗಮನವನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮೀ, ಈ ಸಭೆಯ ಕಾರ್ಯಕಲಾಪಗಳನ್ನು ಸೂಕ್ಷ್ಮವಾಗಿ ಮತ್ತು ತೀವ್ರವಾಗಿ ಗಮನಿಸಿದರೆ ಸಾರ್ವಜನಿಕರಿಗೇ ಆಗಲೀ ಸಭಿಕರಿಗೇ ಆಗಲೀ ಒಂದು ವಿಷಯ ಎದ್ದು ಕಾಣುತ್ತದೆ. ಪ್ರಶ್ನೆಗಳಿಗೆ ಉತ್ತರಗಳು ಬರುವುದು ಹೆಚ್ಚಾಗಿರುವಾಗ ಪ್ರಶ್ನೋತ್ತರಗಳಿಗಾಗಿ ಇರುವ ಒಂದು ಗಂಟೆಯ ಕಾಲಾವಕಾಶವನ್ನೂ ತೆಗೆದು ಹಾಕಿರುವುದನ್ನು ನೋಡುವುದಾದರೆ ಈ ಸಭೆಯ ಘನತೆಗೆ ತಕ್ಕಂತೆ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೋ ಇಲ್ಲವೋ ಎನ್ನುವುದು ಚೆನ್ನಾಗಿ ಗೊತ್ತಾಗುತ್ತದೆ. ಪ್ರಶ್ನೆಗಳಿದ್ದೂ ಅದಕ್ಕೆ ಉತ್ತರ ಬರಲಿಲ್ಲ ಎಂದರೆ ಒಟ್ಟಿನಲ್ಲಿ ಈ ಪವಿತ್ರ ಸಭೆಯ ಘನ ಉದ್ದೇಶಕ್ಕೆ ಲೋಪ ಬಂದಿದೆ. ಈ ದೃಷ್ಟಿಯಿಂದ ಈ ಪ್ರಶ್ನೋತ್ತರಗಳ ವಿಚಾರವನ್ನು ಗಂಭೀರವಾಗಿ ಪರ್ಯಾಲೋಚಿಸಿ ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂಬುದು ನನ್ನ ಅರಿಕೆ.

†ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಸ್ವಾಮೀ, ತಾವು ಪಾಶ್ಚಿಮಾತ್ಯ ದೇಶಗಳಿಗೆ ಹೋಗಿ ಅಲ್ಲಿನ ಪಾರ್ಲಮೆಂಟಿನ ಪ್ರಜಾ ಪ್ರಭುತ್ವವನ್ನು ನೋಡಿ ಬಂದಿರುವಾಗ ಅಲ್ಲಿಯೂ ಕೂಡ ವಿರೋಧ ಪಕ್ಷಪಕ್ಷದವರು ಪ್ರಶ್ನೆಗಳನ್ನು ಕಳುಹಿಸಿಕೊಟ್ಟರೆ ಮಾನ್ಯತೆ ಕೊಡುತ್ತಾರೆಯೇ ಇಲ್ಲವೇ ಅಥವಾ ಇನ್ನಾವುದಾದರೂ ವ್ಯತ್ಯಾಸಗಳಿವೆಯೇ ಎಂಬುದರ ಬಗ್ಗೆ ತಾವು ಇಲ್ಲಿಯವರೆಗೂ ವಿವರಗಳನ್ನು ಕೊಡಲಿಲ್ಲ. ಈಗ ಸದವಕಾಶ ಬಂದಿದೆ. ಇಲ್ಲಿಯೂ ಕೂಡ ವಿವರವಾಗಿ ತಿಳಿಯುವಂತೆ ಹೇಳಿದರೆ ನಮಗೂ ಗೊತ್ತಾಗುತ್ತದೆ. ಅಲ್ಲಿಯೂ ಪ್ರಶ್ನೋತ್ತರಗಳು ನಿಧಾನವಾಗಲು ಏನಾದರೂ ಕ್ರಮ ತೆಗೆದುಕೊಳ್ಳುವ ನಡವಳಿಕೆಗಳೇನಾದರೂ ಇವೆಯೇ? ದೇವರಿಗಿಂತಲೂ ತಮಗೆ ಇಲ್ಲಿ ಪವರು ಜಾಸ್ತಿ. ಅದರಿಂದ ತಮ್ಮ ಕಾಲದಲ್ಲೇ ಇದನ್ನೆಲ್ಲಾ ನಿರ್ಮಾಡಬೇಕು ಎಂದು ನಾನು ಅರಿಕೆ ಮಾಡುತ್ತೇನೆ.

†ಶ್ರೀ ಗೋಪಾಲ ಸಾಲೆನ್ನ (ಮೂಡುಬಿದ್ರಿ).—ಸ್ವಾಮೀ, ಪ್ರಶ್ನೋತ್ತರಗಳಿಗಾಗಿ ಒಂದು ಗಂಟೆಯಷ್ಟು ಕಾಲವನ್ನು ಮೀಸಲಾಗಿ ಇಟ್ಟಿರುವಾಗ ಪ್ರಶ್ನೆಗಳಿಗೆ ಉತ್ತರ ಕಳುಹಿಸದೇ ಇರಲು ಕಾರಣವೇನು? ಕಳೆದ ಸೆಷನ್ನಿನಲ್ಲಿ ಕಳುಹಿಸಿದ ಎಷ್ಟೋ ಪ್ರಶ್ನೆಗಳಿಗೆ ಇನ್ನೂ ಉತ್ತರ ಬಾರದೇ ಇವೆ. ಇವನ್ನೆಲ್ಲಾ ಸರಿಯಾಗಿ ಪರಿಶೀಲನೆ ಮಾಡಿ ಮಾನ್ಯ ಅಧ್ಯಕ್ಷರು ಸರಿಯಾದ ಒಂದು ಕಡಿವಾಣವನ್ನು ಹಾಕಲಿ ಎಂದು ನಾನು ಸೂಚಿಸುತ್ತೇನೆ. ಪ್ರಶ್ನೋತ್ತರಗಳಿಂದ ಜನಗಳಿಗೆ ವಿಷಯಗಳನ್ನು ತಿಳಿಯಲು ಅನುಕೂಲವಾಗುತ್ತದೆ. ಅಂತಹ ಅವಕಾಶವನ್ನು ಕಲ್ಪಿಸಿಕೊಡುವುದು ಆಗತ್ಯ. ಏಕೆ ಇಷ್ಟು ಪ್ರಶ್ನೆಗಳಿಗೆ ಉತ್ತರ ಕಳುಹಿಸರಾಗಲಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಈ ಸಭೆಗೆ ತಿಳಿಸುವುದು ಆಗತ್ಯ.

---

**Chair's Statement re: No. of Questions admitted, answered etc.**

Mr. SPEAKER.—I would like to refer to a few facts. I read them over on the last occasion. The position is slightly modified and therefore I am giving the latest particulars that are relevant. As I said on the last occasion, the number of questions admitted and sent to Government is 1,010. The number of questions for which replies are due as on 28th September is 918. Number of questions for which replies have been received as on 28th is 671, and as on 3rd, 701. The Number of questions for which answers have been given on the Floor of the House is 664 as on 28th. As on the 3rd October that number of questions for which